# ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮ

**● ತತ್ತ್ವನಿಷ್ಠ, ಹಳಿಯಾಳ:** ಋತುಚಕ್ರದ ಸಮಯದಲ್ಲಿ ವಿದ್ಯಾರ್ಥಿನಿಯರು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ ಎಂದು ವೈಶಾಖಾ ಕುಲಕರ್ಣಿ ಹೇಳಿದರು.

ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯವು ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ ಆರೋಗ್ಯ ಜಾಗೃತಿ ಕುರಿತಾದ ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಂಡಿದ್ದರು.

ಇಕೋ ಹಬ್ ಫೌಂಡೇಶನ್ ನ ಮುಖ್ಯ ಕಾರ್ಯ ನಿರ್ವಾಹಕಿ ವೈಶಾಖಾ ಕುಲಕರ್ಣಿ ಪಟ್ಟಣದ ಜವಳಿಗಲ್ಲಿಯ ಸರಕಾರಿ ಮಹಿಳಾ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಋತುಚಕ್ರ ಕುರಿತಾಗಿ ಸರಿಯಾದ ತಿಳುವಳಿಕೆ ನೀಡುತ್ತ, ಸ್ವಚ್ಛತೆ ಬಗ್ಗೆ ಗಮನ ಹರಿಸಬೇಕು ಎಂದರು. ಸಾನಿಟರಿ



ಪ್ಯಾಡ್ ಬಳಕೆ, ಪೌಷ್ಟಿಕ ಆಹಾರ ಸೇವನೆ ಕುರಿತಾಗಿ ಮಾಹಿತಿ ನೀಡಿದರು. ರಕ್ತ ಸ್ರಾವ ಹಾಗೂ ಹೊಟ್ಟೆ ನೋವು ನಿಯಂತ್ರಣಕ್ಕೆ ಮಾತ್ರೆಗಳ ಮೊರೆ ಹೋಗದಂತೆ ಸಲಹೆ ನೀಡಿದರು. ತಮ್ಮ ಶಾಲಾ ವಿದ್ಯಾರ್ಥಿನಿಯರಿಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿರುವ ವಿಡಿಐಟಿ ಮಹಾವಿದ್ಯಾಲಯಕ್ಕೆ ಆಭಾರಿಯಾಗಿದ್ದೇವೆ ಎಂದು ಮುಖ್ಯ ಅಧ್ಯಾಪಕ ವಿನಾಯಕ ಶೇಟ್ ತಿಳಿಸಿದರು.

ಈ ಕಾರ್ಯಕ್ರಮವನ್ನು ಶ್ರೀಮತಿ. ಲಕ್ಷ್ಮಿ ಕುಲಕರ್ಣಿ, ಡಾ. ಪೂರ್ಣಿಮಾ ರಾಯಕರ್ , ಡಾ. ಸ್ನೇಹಾ ಕುಲಕರ್ಣಿ ಸಂಯೋಜಿಸಿದ್ದರು. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಋತುಚಕ್ರ ಕುರಿತಾದ ತಪ್ಪು ಕಲ್ಪನೆ ದೂರಗೊಳಿಸಿ, ಸ್ಪಷ್ಟತೆ ನೀಡುವ ಉದ್ದೇಶದ ಈ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಜಾಗೃತಿ ಕಾರ್ಯಕ್ರಮ



ಅಳ್ನಾವರ, ಫೆ. 23: ಋತುಚಕ್ರದ ಸಮಯದಲ್ಲಿ ವಿದ್ಯಾರ್ಥಿನಿಯರು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ ಎಂದು ವೈಶಾಖಾ ಕುಲಕರ್ಣಿ ಹೇಳಿದರು. ಪಟ್ಟಣದ ಕೆ ಎಲ್ ಎಸ್ ವಿ ಡಿ ಐ ಟಿ ಮಹಾವಿದ್ಯಾಲಯವು ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ ಆರೋಗ್ಯ ಜಾಗೃತಿ ಕುರಿತಾದ ಕಾರ್ಯಕ್ರಮವನ್ನು ಇತ್ತೀಚೆಗೆ ಹಮ್ಮಿಕೊಂಡಿದ್ದರು.

ಏಕೊ ಹಬ್ ಫೌಂಡೇಶನ್ ನ ಮುಖ್ಯ ಕಾರ್ಯ ನಿರ್ವಾಹಕಿ ವೈಶಾಖಾ ಕುಲಕರ್ಣಿ ಪಟ್ಟಣದ ಜವಳಿಗಲ್ಲಿಯ ಸರಕಾರಿ ಮಹಿಳಾ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಋತುಚಕ್ರ ಕುರಿತಾಗಿ ಸರಿಯಾದ ತಿಳುವಳಿಕೆ ನೀಡುತ್ತ, ಸ್ವಚ್ಛತೆ ಬಗ್ಗೆ ಗಮನ ಹರಿಸಬೇಕು ಎಂದರು. ಸಾನಿಟರಿ ಪ್ಯಾಡ್ ಬಳಕೆ, ಪೌಷ್ಟಿಕ ಆಹಾರ ಸೇವನೆ ಕುರಿತಾಗಿ ಮಾಹಿತಿ ನೀಡಿದರು. ರಕ್ತ ಸ್ರಾವ ಹಾಗೂ ಹೊಟ್ಟೆ ನೋವು ನಿಯಂತ್ರಣಕ್ಕೆ ಮಾತ್ರೆಗಳ ಮೊರೆ ಹೋಗದಂತೆ ಸಲಹೆ ನೀಡಿದರು. ತಮ್ಮ ಶಾಲಾ ವಿದ್ಯಾರ್ಥಿನಿಯರಿಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿರುವ ವಿ ಡಿ ಐ ಟಿ ಮಹಾವಿದ್ಯಾಲಯಕ್ಕೆ ಆಭಾರಿಯಾಗಿದ್ದೇವೆ ಎಂದು ಮುಖ್ಯ ಅಧ್ಯಾಪಕ ವಿನಾಯಕ ಶೇಟ್ ತಿಳಿಸಿದರು.

ಈ ಕಾರ್ಯಕ್ರಮವನ್ನು ಶ್ರೀಮತಿ. ಲಕ್ಷ್ಮಿ ಕುಲಕರ್ಣಿ, ಡಾ. ಪೂರ್ಣಿಮಾ ರಾಯಕರ್ , ಡಾ. ಸ್ನೇಹಾ ಕುಲಕರ್ಣಿ ಸಂಯೋಜಿಸಿದ್ದರು. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಋತುಚಕ್ರ ಕುರಿತಾದ ತಪ್ಪು ಕಲ್ಪನೆ ದೂರಗೊಳಿಸಿ, ಸ್ಪಷ್ಟತೆ ನೀಡುವ ಉದ್ದೇಶದ ಈ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.